ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೧೯೮೬-೮೭ನೇ ಸಾಲಿನಲ್ಲಿ (೧-೪-೮೬ ರಿಂದ ೩೧-೩-೮೭ರವರೆಗೆ) ಹಾಲಿ ವಿದ್ಯುತ್ ಉಪಯೋಗವಾಗುತ್ತಿರುವ ಪ್ರಮಾಣದ ಆಧಾರದ ಮೇಲೆ ಸುಮಾರು ೧೪,೮೫೫ ಮಿಲಿಯನ್ ಯೂನಿಟ್‌ಗಳು ಬೇಕಾಗುತ್ತದೆಂದು ನಿರೀಕ್ಷಿಸಲಾಗಿದೆ. ಇದೇ ಅವಧಿಯಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್, ನೆರೆ ರಾಜ್ಯಗಳಿಂದ ಆಮದು ಮತ್ತು ಕೇಂದ್ರ ಯೋಜನೆಗಳಿಂದ ರಾಜ್ಯದ ಪಾಲು ಎಲ್ಲಾ ಒಂದಾಗಿ ಒಟ್ಟಿಗೆ ಸೇರಿಸಿದರೂ ಸುಮಾರು ೧೧,೦೦೦ ಮಿಲಿಯನ್ ಯೂನಿಟ್‌ಗಳು ದೊರಕಬಹುದೆಂದು ನಿರೀಕ್ಷಿಸಲಾಗಿದೆ ಆದ್ದರಿಂದ ವಿದ್ಯುತ್ ಕೊರತೆಯ ಪ್ರಮಾಣ ೩,೮೫೫ ಮಿಲಿಯನ್ ಯೂನಿಟ್‌ಗಳಾಗಬಹುದೆಂದು ನಿರೀಕ್ಷಿಸಲಾಗಿದೆ.

ಈ ವರ್ಷದಲ್ಲಿ ಲಿಂಗನಮಕ್ಕಿ ಮತ್ತು ಸೂಫಾ ಜಲಾಶಯಗಳಿಗೆ ಬರುತ್ತಿರುವ ನೀರಿನ ಪ್ರಮಾಣ ನಿರೀಕ್ಷಿಸಿದಕ್ಕಿಂತಲೂ ಬಹಳ ಕಡಿಮೆಯಾಗಿದೆ. ವಿದ್ಯುತ್ ಸರಬರಾಜಿನ ಸ್ಥಿತಿ ಮತ್ತು ಕೊರತೆಯ ಪ್ರಮಾಣವನ್ನು ಸೆಪ್ಟೆಂಬರ್ ೮೬ರ ಕೊನೆಯ ವೇಳೆಗೆ ಅಂದಾಜು ಮಾಡಲು ಸಾಧ್ಯವಾಗುತ್ತದೆ.

ಆ) ಕೈಗಾರಿಕೆಗಳಿಗೆ ಈಗ ಹಾಲಿ ವಿಧಿಸಿರುವ ವಿದ್ಯುತ್ತಿನ ಕಡಿತವನ್ನು ಸಡಿಲಗೊಳಿಸುವ ಸಾಧ್ಯತೆ ಯೆನ್ನು ಪವರ್ ರೆವ್ಯೂ. ಕಮಿಟಿಯ ಸಲಹೆಯ ಮೇಲೆ ಸರ್ಕಾರ ನಿರ್ಣಯ ಪ್ರಕಟಿಸುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ವೀರಣ್ಣ (ಸಾರಿಗೆ ಮಂತ್ರಿಗಳು).—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಒಂಭತ್ತನೇ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.

ಕರ್ನಾಟಕ ರಾಜ್ಯದ ಸಾರ್ವಜನಿಕ ಉದ್ದಿಮೆಗಳ ಲಾಭ ನಷ್ಟಗಳ ಬಗ್ಗೆ

೧೬೨. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ವಿವಿಧ ಸಾರ್ವಜನಿಕ ಉದ್ಯಮಗಳ ಸಂಖ್ಯೆ ಎಷ್ಟು, ಹಾಗೂ ಅವುಗಳ ಹೆಸರೇನು?

ಆ) ೧೯೮೫-೮೬ ಹಾಗೂ ೧೯೮೬-೮೭ರಲ್ಲಿ ಮೇಲ್ಕಂಡ ಉದ್ಯಮಗಳು ಗಳಿಸಿರುವ ಲಾಭದ ಮೊತ್ತವೆಷ್ಟು, ಮತ್ತು ಲಾಭದಲ್ಲಿ ನಡೆಯುತ್ತಿರುವ ಉದ್ಯಮಗಳ ಸಂಖ್ಯೆ ಎಷ್ಟು?

ಇ) ೧೯೮೫-೮೬, ೧೯೮೬-೮೭ರಲ್ಲಿ ಮೇಲ್ಕಂಡ ಉದ್ಯಮಗಳಲ್ಲಿ ಆಗಿರುವ ನಷ್ಟ ಹಾಗೂ ಅದರಿಂದ ಉಂಟಾದ ಹಾನಿ ಎಷ್ಟು?

ಈ) ಅವಶ್ಯಕತೆಗಿಂತ ಹೆಚ್ಚಾಗಿರುವ ನೌಕರರು ಅಥವಾ ಅಧಿಕಾರಿಗಳಿರುವ ಉದ್ಯಮಗಳ ಸಂಖ್ಯೆ ಎಷ್ಟು, ಹಾಗೂ ಆ ಉದ್ಯಮಗಳ ಹೆಸರುಗಳೇನು ?

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ೫೨ ಅವುಗಳ ಹೆಸರುಗಳನ್ನು ಅನುಬಂಧ ೧ರಲ್ಲಿ ಕೊಡಲಾಗಿದೆ.

ಆ) ೧೯೮೪-೮೫ರಲ್ಲಿ ೨೮* ಸಾರ್ವಜನಿಕ ಉದ್ದಿಮೆಗಳು ಗಳಿಸಿರುವ ಲಾಭದ ಮೊತ್ತ *೨೭.೬೭ ಕೋಟಿ ರೂ.ಗಳು ೧೯೮೫-೮೬ರ ಸಾಲಿನ ಅಂಕಿ-ಅಂಶಗಳು ಲಭ್ಯವಿರುವುದಿಲ್ಲ.

ಇ) ೧೯೮೬-೮೭ರ ಸಾಲಿನಲ್ಲಿ ೨೮* ಸಾರ್ವಜನಿಕ ಉದ್ದಿಮೆಗಳು ಅನುಭವಿಸಿರುವ ನಷ್ಟದ ಮೊತ್ತ ೮೫.೫೬* ಕೋಟಿ ರೂ.ಗಳು ೧೯೮೫-೮೬ರ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.

ಈ) ಸಾಮಾನ್ಯವಾಗಿ ಸಾರ್ವಜನಿಕ ಉದ್ದಿಮೆಗಳಲ್ಲಿ ನೌಕರರು ಅಥವಾ ಅಧಿಕಾರಿಗಳ ಸಂಖ್ಯೆ ಅವಶ್ಯಕತೆಗಿಂತ ಹೆಚ್ಚಾಗಿರುವ ಸಾಧ್ಯತೆ ಇರುವುದಿಲ್ಲ. ಒಮ್ಮೊಮ್ಮೆ ಉದ್ದಿಮೆಗಳಲ್ಲಿ ನಾನಾ ಕಾರಣಗಳಿಂದ ಕಾರ್ಯ ಚಟುವಟಿಕೆಗಳು ಕಡಿಮೆಯಾಗಿರುವುದುಂಟು, ಅಂತಹ ಸಂದರ್ಭಗಳಲ್ಲಿ ಉದ್ದಿಮೆಗಳಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳನ್ನು ಮತ್ತು ನೌಕರರ ಹಾಗೂ ಅಧಿಕಾರಿಗಳ ಸಂಖ್ಯೆಯನ್ನು ಪರಿಶೀಲಿಸಿದರೆ ನೌಕರರ ಅಥವಾ ಅಧಿಕಾರಿಗಳ ಸಂಖ್ಯೆ ಹೆಚ್ಚಾದಂತೆ ಕಾಣಿಸಬಹುದು. ಆದ್ದರಿಂದ ಸಾರ್ವಜನಿಕ ಉದ್ದಿಮೆಗಳಲ್ಲಿ ಉದ್ಯೋಗಿಗಳ ಸಂಖ್ಯೆ ಹೆಚ್ಚು ಅಥವಾ ಕಡಿಮೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ.

ಅನುಬಂಧ-೧

ಕ್ರಮ ಸಂಖ್ಯೆ	ಸಾರ್ವಜನಿಕ ಉದ್ದಿಮೆಗಳ ಹೆಸರುಗಳು ೧-೪-೧೯೮೫ರಲ್ಲಿದ್ದಂತೆ
೧	ಕರ್ನಾಟಕ ಗೇರು ಬೀಜ ಅಭಿವೃದ್ಧಿ ನಿಗಮ ನಿಯಮಿತ
೨	ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್.
೩	ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ.
೪	ಕರ್ನಾಟಕ ವಿಮಾನಯಾನ ಅಭಿವೃದ್ಧಿ ನಿಗಮ ನಿಯಮಿತ
೫	ಕರ್ನಾಟಕ ಆಣ್ವಿ ನೆರವುತೋಟಗಳ ನಿಗಮ ನಿಯಮಿತ
೬	ಕರ್ನಾಟಕ ಕೈಮಗ್ಗದ ಅಭಿವೃದ್ಧಿ ನಿಗಮ ನಿಯಮಿತ
೭	ಕರ್ನಾಟಕ ಚರ್ಮ ಕೈಗಾರಿಕೋದ್ಯಮಗಳ ನಿಗಮ ನಿಯಮಿತ
೮	ಕರ್ನಾಟಕ ರಾಜ್ಯ ವಿದ್ಯುತ್ ಉಪಕರಣಗಳ ಅಭಿವೃದ್ಧಿ ನಿಗಮ ನಿಯಮಿತ
೯	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ
೧೦	ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್
೧೧	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ
೧೨	ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
೧೩	ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಲಿಮಿಟೆಡ್.
೧೪	ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
೧೫	ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
೧೬	ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್
೧೭	ಕರ್ನಾಟಕ ಭೂ ಸೇನಾ ನಿಗಮ ನಿಯಮಿತ
೧೮	ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ನಿಗಮ ನಿಯಮಿತ
೧೯	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆಗಳ ನಿಗಮ ನಿಯಮಿತ
೨೦	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
೨೧	ಶ್ರೀ ಕಂಠೀರವ ಸ್ಟುಡಿಯೋಸ್ ಲಿಮಿಟೆಡ್

*ಅಂಕಿ ಅಂಶಗಳು ತಾತ್ಕಾಲಿಕ.

೧	೨
೨೨	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯ ಮಿತ
೨೩	ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್
೨೪	ಕರ್ನಾಟಕ ರೇಷ್ಮೆ ಕೈಗಾರಿಕೆಗಳ ನಿಗಮ ನಿಯಮಿತ
೨೫	ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜೆನ್ಸೀಸ್ ಲಿಮಿಟೆಡ್
೨೬	ಬೆಂಗಳೂರು ಅನಿಮಲ್ ಫುಡ್ ಕಾರ್ಪೋರೇಷನ್
೨೭	ಚಾಮುಂಡಿ ಮೆಷೀನ್ ಟೂಲ್ಸ್ ಲಿಮಿಟೆಡ್
೨೮	ಹಟ್ಟಿ ಚಿನ್ನದ ಗಣಿ ನಿಗಮ ನಿಯಮಿತ
	೧ ಚಿತ್ರದುರ್ಗ ಕಾಪರ್ ಕಂಪೆನಿ ಲಿ.
	೨ ಕರ್ನಾಟಕ ಕಾಪರ್ ಕನ್ಸ್ಟ್ರಕ್ಷನ್ ಲಿ.
೨೯	ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮಿಷನರೀಸ್ ಕಂಪೆನಿ ಲಿಮಿಟೆಡ್
೩೦	ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್
೩೧	ಕರ್ನಾಟಕ ವಿದ್ಯುತ್ ಕಾರ್ಖಾನೆ ಲಿಮಿಟೆಡ್
೩೨	ಕರ್ನಾಟಕ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್
೩೩	ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್
೩೪	ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್
೩೫	ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
೩೬	ಮೈಸೂರು ಅರಗು ಮತ್ತು ಬಣ್ಣಗಳ ಕಾರ್ಖಾನೆ ನಿಯಮಿತ
೩೭	ಮೈಸೂರು ಮಿನರಲ್ಸ್ ಲಿಮಿಟೆಡ್
೩೮	ಮೈಸೂರು ಕಾಗದದ ಕಾರ್ಖಾನೆ ನಿಯಮಿತ
೩೯	ಮೈಸೂರು ಸಕ್ಕರೆ ಕಾರ್ಖಾನೆ ನಿಯಮಿತ
೪೦	ಮೈಸೂರು ಟೊಬ್ಯಾಕೋ ಕಂಪೆನಿ ಲಿಮಿಟೆಡ್
೪೧	ಎನ್.ಜಿ.ಇ.ಎಫ್. ಲಿಮಿಟೆಡ್
೪೨	ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ನಿಯಮಿತ
೪೩	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
೪೪	ಕರ್ನಾಟಕ ರಾಜ್ಯ ವೀನಿಯರ್ಸ್.
೪೫	ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪೆನಿ ಲಿಮಿಟೆಡ್
೪೬	ಕರ್ನಾಟಕ ರಾಜ್ಯ ಹಣಕಾಸು ನಿಗಮ ನಿಯಮಿತ
೪೭	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ.
೪೮	ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ
೪೯	ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ.
೫೦	ಮೈಸೂರು ಅಸಿಟೇಟ್ಸ್ ಅಂಡ್ ಕೆಮಿಕಲ್ಸ್ ಕಂಪೆನಿ ಲಿಮಿಟೆಡ್
೫೧	ಕರ್ನಾಟಕ ಪ್ರೋಟೀನ್ಸ್ ಲಿಮಿಟೆಡ್
೫೨	ಮೈಸೂರು ಲ್ಯಾಂಪ್ ವರ್ಕ್ಸ್.

ಆನೆಗಳ ಹಾವಳಿಯಿಂದ ಉಂಟಾಗಿರುವ ತೊಂದರೆಯ ಬಗ್ಗೆ

೬೦೯. ಶ್ರೀ ಐ. ಬಿ. ಶಂಕರ್ (ಚಿಕ್ಕಮಂಗಳೂರು).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಗಳೂರು ತಾಲ್ಲೂಕಿನ ಅರಣ್ಯ ಪ್ರದೇಶಗಳಲ್ಲಿ ಆನೆಯ ಹಾವಳಿ ಜಾಸ್ತಿಯಾಗಿದ್ದು ರೈತರ ಪೈರುಗಳಿಗೆ ಮತ್ತು ಜನರಿಗೆ ತೊಂದರೆ ಉಂಟಾಗಿರುವ ಬಗ್ಗೆ ಸರ್ಕಾರ ತಿಳಿದುಕೊಂಡಿರುವ ಕ್ರಮವೇನು ?